## ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 10.03.2016 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2016ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡಾವಳಿಗಳು**

### ಪ್ರಾರಂಭಿಕ

1. ಶ್ರೀ ಪಿ.ಸಿ. ಎಂ. ಕುಂಞ, ಮಾಜಿ ಸೆನೆಟ್ ಹಾಗೂ ಸಿಂಡಿಕೇಟು ಸದಸ್ಯರು, ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿ ವ್ಯಾಸಾಂಗ ಮಾಡುತ್ತಿದ್ದ ಮೂರು ಮಂದಿ ವಿದ್ಯಾರ್ಥಿಗಳು ನಿಧನರಾದ ಹಿನ್ನೆಲೆಯಲ್ಲಿ ಸಭೆಯು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಸಂತಾಪ ಸೂಚಕ ನಿರ್ಣಯವನ್ನು ಕೈಗೊಂಡಿತು.

### ಪ್ರಾಸ್ತಾವಿಕ

1. ಪ್ರೊ.ಎ.ಎಮ್.ಖಾನ್, ಕುಲಸಚಿವರ (ಪರೀಕ್ಷಾಂಗ) ಇವರು ವಿಶ್ವವಿದ್ಯಾನಿಲಯದ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಇತ್ತೀಚೆಗೆ ಮಾಧ್ಯಮಗಳಲ್ಲಿ ಪ್ರಕಟಿತವಾದ ಸುದ್ದಿಗಳ ಬಗ್ಗೆ, ಸಭೆಗೆ ಪೂರ್ಣ ವಿವರಗಳನ್ನು ಮಾಹಿತಿಗಳೊಂದಿಗೆ ವರದಿಯನ್ನು ನೀಡಿದರು. ಸಭೆಯು ಈಗ ಇರುವ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಬೇಕೆಂದು ನಿರ್ಧರಿಸಿ, ಮುಂದಿನ ಪರೀಕ್ಷೆಗೆ ಸಂಬಂಧಿಸಿದಂತೆ 5ನೇ ಸೆಮಿಸ್ಟರ್ ಪರೀಕ್ಷೆಗೆ ಮಾತ್ರ ವಿದ್ಯಾರ್ಥಿಗೆ ಅವಕಾಶ ಮಾಡುವುದು ಸೂಕ್ತ ಎಂದು ತೀರ್ಮಾನಿಸಲಾಯಿತು. ಇದಕ್ಕೆ ಸಂಬಂಧಪಟ್ಟಂತೆ ಹೊಸ ಅಧಿಸೂಚನೆಯನ್ನು ಎಲ್ಲಾ ಕಾಲೇಜುಗಳಿಗೆ ತಿಳಿಸಬೇಕೆಂದು ಮತ್ತು ನಮ್ಮ ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲೂ ಸಹಾ ಪ್ರಕಟಿಸಬೇಕೆಂದು ತಿಳಿಸಲಾಯಿತು.

2. ಕುಲಸಚಿವ (ಪರೀಕ್ಷಾಂಗ) ಸಭೆಯಲ್ಲಿ ಮಾತನಾಡುತ್ತಾ ವಿದ್ಯಾರ್ಥಿಗಳು ವರ್ಷವಿಡೀ ಏನಾದರೊಂದು ತರಹದ ದಾಖಲೆಗಳಿಗಾಗಿ ಅಂದರೆ ಪದವಿ ಪ್ರಮಾಣಪತ್ರಗಳಾಗಿರಬಹುದು ಅಥವಾ ಇತರ ಅಗತ್ಯ ಅಂಕ ಪಟ್ಟಿಗಳಾಗಿರಬಹುದು ಬರುತ್ತಲೇ ಇದ್ದು, ಕೊನೆಯ ಕ್ಷಣದಲ್ಲಿಯಾದರೂ ತುರ್ತಾಗಿ ಅವರ ಬೇಡಿಕೆಯನ್ನು ಪೂರೈಸಬೇಕಾಗಿರುತ್ತದೆ. ಇದಕ್ಕಾಗಿ ನಮ್ಮ ವಿಭಾಗದ ಸಿಬ್ಬಂದಿಗಳು ದಾಖಲೆಗಳ ಪರಿಶೀಲನೆ ಮತ್ತು ಅವುಗಳ ಅಗತ್ಯ ಪ್ರಮಾಣ ಪತ್ರಗಳನ್ನು ನೀಡಲು ಕಾಲಾನಂತರದಲ್ಲಿಯೂ ಕಾರ್ಯನಿರ್ವಹಿಸ ಬೇಕಾಗಿರುತ್ತದೆ. ಇದಕ್ಕಾಗಿ ಪರೀಕ್ಷಾಂಗ ವಿಭಾಗದಲ್ಲಿ ಈ ಕೆಳಗಿನ ಸೇವೆಗಳನ್ನು ಪರಿಚಯಿಸುವುದಾಗಿ ಪ್ರಸ್ತಾಪಿಸಿ, ವಿದ್ಯಾರ್ಥಿಗಳ ಅಗತ್ಯಗಳನ್ನು ಪೂರೈಸಲು ಸಹಾಯ ಮಾಡಿದಂತಾಗುತ್ತದೆ ಎಂದು ತಿಳಿಸಿದರು.

   ಪರೀಕ್ಷಾಂಗ ವಿಭಾಗದ ವಿವಿಧ ದಾಖಲೆಗಳನ್ನು ನೀಡುವ ಕುರಿತು ಈ ಕೆಳಕಂಡಂತೆ ಶುಲ್ಕವನ್ನು ವಿಧಿಸಲು ಸಭೆಯು ತೀರ್ಮಾನಿಸಿತು.

i) **Provisional Degree Certificate**

Provisional Degree Certificate shall be valid for 6 months and Fee to be charged is Rs.1000/-.

ii) **Payment of Degree Certificate/Convocation fees from the outgoing students along with their final semester / year exam fees only.**

iii) **Payment of fees for various certificates under Tatkal Scheme.**

The fee to be charged for issuing Degree Certificate under Tatkal Scheme is as follows:

a) Candidates who are eligible between 2009 and 2012:
Rs. 3000+Regular Convocation and Application Fee of present date.

b) Candidates who are eligible between 2005 and 2008:
Rs. 5000+Regular Convocation and Application Fee of present date.

c) Candidates who are eligible prior to 2005:
Rs.7000+Regular Convocation and Application Fee of present date.

ಇದು ಈ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ಬರುವಂತೆ ಸಭೆ ತೀರ್ಮಾನಿಸಿತು.

**Iನಡಾವಳಿಗಳ ದೃಢೀಕರಣ**

ದಿನಾಂಕ 02.02.2016ರಂದು ನಡೆದ 2016ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡಾವಳಿಯನ್ನು ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾಸ.1:8(2016)

ವಿಷಯ: ಪದವಿ ಮಟ್ಟದ ಹೋಮ್ ಸೈನ್ಸ್ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

ನಿರ್ಣಯ: ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 33(1) ಮತ್ತು (2)ರ ಪ್ರಕಾರ ಹಾಗೂ ಅಧ್ಯಯನ ಮಂಡಳಿ ಪರಿನಿಯಮ ಪಾರ 2ರ ಪ್ರಕಾರ ಪದವಿಮಟ್ಟದ ಹೋಮ್ ಸೈನ್ಸ್ ಅಧ್ಯಯನ ಮಂಡಳಿಯನ್ನು ರಚಿಸಲು ಸಿಂಡಿಕೇಟು ಸಭೆಯು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

**II ಅನುಸರಣಾ ವರದಿಯ ಅನುಮೋದನೆ**

ದಿನಾಂಕ 19.12.2015ರಂದು ನಡೆದ ಸಿಂಡಿಕೇಟಿನ 2015ನೇ ಸಾಲಿನ ಎಂಟನೆಯ ಸಾಮಾನ್ಯ ಸಭೆಯ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

**III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:**

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ.2:1(2016)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಅವರಣದಲ್ಲಿರುವ ಭಾರತೀಯ ಸ್ಟೇಟ್‌ಬ್ಯಾಂಕ್ ಶಾಖೆಗೆ ನೀಡಿದ ಕಟ್ಟಡದ ಪರವಾನಗಿ ಅವಧಿಯನ್ನು ವಿಸ್ತರಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

ನಿರ್ಣಯ: ಭಾರತೀಯ ಸ್ಟೇಟ್‌ಬ್ಯಾಂಕ್ ಶಾಖೆಗೆ ನೀಡಿದ ಕಟ್ಟಡಕ್ಕೆ ಪ್ರಸ್ತುತ ಪಾವತಿಸುತ್ತಿರುವ ಪರವಾನಗಿ ಶುಲ್ಕ ರೂ.18,400/- ಕ್ಕೆ ಶೇಕಡ 25% ಹೆಚ್ಚಳದೊಂದಿಗೆ ಮುಂದಿನ 3 ವರ್ಷಗಳ ಅವಧಿಗೆ ಪರವಾನಗಿಯನ್ನು ಮುಂದುವರಿಸಲು ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ.2:2(2016)

**ವಿಷಯ:** CARRT ಪ್ರಯೋಗಾಲಯದ Gamma Chamber / Low Dose Irradiator / Blood Irradiator ಬಳಕೆದಾರರಿಗೆ ಶುಲ್ಕ ನಿಗದಿ ಮಾಡುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ದಿನಾಂಕ 29.01.2016ರಂದು ನಡೆದ ಶುಲ್ಕ ಪರಿಷ್ಕರಣೆ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾಸ.2:3(2016)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಎರೆಹುಳ ಗೊಬ್ಬರ ಘಟಕ ಸ್ಥಾಪಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಸದರಿ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಈಗಾಗಲೇ ವಿವಿಧ ಸಂಸ್ಥೆಗಳಲ್ಲಿ ಸ್ಥಾಪಿತಗೊಂಡು ಕಾರ್ಯ ನಿರ್ವಹಿಸುತ್ತಿರುವ ಎರೆಹುಳ ಗೊಬ್ಬರ ಘಟಕಗಳಿಂದ ಈ ಬಗ್ಗೆ ವರದಿ ತೆಗೆದುಕೊಂಡು ಮುಂದಿನ ಸಭೆಗೆ ಮರುಮಂಡಿಸಲು ನಿರ್ಣಯಿಸಲಾಯಿತು. ಈ ವಿಷಯಕ್ಕೆ ಸಂಬಂಧಿಸಿದಂತೆ ತಜ್ಞರ ಒಂದು ತಂಡವನ್ನು ರಚಿಸಿ ಕಾರ್ಯನಿರತ ಘಟಕಗಳಿಗೆ ಭೇಟಿ ನೀಡಿ ವರದಿ ನೀಡಬೇಕೆಂದು ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾಸ.2:4(2016)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿಗೆ Steel Perfo Chair with full writing pad with bottom self ಗಳನ್ನು ಖರೀದಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಸದರಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾಸ.2:5(2016)

**ವಿಷಯ:** ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು (ಘಟಕ ಕಾಲೇಜು), ಮಡಿಕೇರಿ ಇಲ್ಲಿ ಬಿ. ಎ. ಕೋರ್ಸಿನಲ್ಲಿ Geography ಯನ್ನು ಐಚ್ಛಿಕ ವಿಷಯವನ್ನಾಗಿ ಪ್ರಾರಂಭಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾಸ.2:6(2016)

**ವಿಷಯ:** ಡಾ. ಅಂಬರೀಶ್ ಪಿ. ಅಂಬಲಗಿ, ಸಹಾಯಕ ಪ್ರಾಧ್ಯಾಪಕರು, ಇಲೆಕ್ಟ್ರಾನಿಕ್ಸ್ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ದಿನಾಂಕ 03.10.2016 ರಿಂದ 04.10.2016 ರವರೆಗೆ Kowloon City, Hong Kong ಇಲ್ಲಿ ನಡೆಯುವ ICGST GSUS 2016 ನಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದಂತೆ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ಮತ್ತು ದಿನಾಂಕ 01.10.2016 ರಿಂದ 07.10.2016ರವರೆಗೆ ಅಧಿಕೃತ ಕಾರ್ಯನಿಮಿತ್ತ ರಜೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಸದರಿಯವರು ಸಮ್ಮೇಳನದ ಶೈಕ್ಷಣಿಕ ಉಪಯುಕ್ತತೆಯ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ಕಡ್ಡಾಯವಾಗಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾಸ.2:7(2016)

**ವಿಷಯ:** ಡಾ. ಸುರೇಶ್ ಪಿ. ಎಸ್., ಸಹಾಯಕ ಪ್ರಾಧ್ಯಾಪಕರು (UGC FRP), ಜೀವವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ದಿನಾಂಕ 01.04.2016ರಿಂದ 04.04.2016 ರವರೆಗೆ Boston, Massachusetts, USA ನಲ್ಲಿ Poster presentation ಮಾಡುವ ಸಲುವಾಗಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಸದರಿಯವರಿಗೆ ಮೇಲ್ಕಾಣಿಸಿದ ಸಭೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದೆ ಭಾಗವಹಿಸಲು ದಿನಾಂಕ 30.03.2016 ರಿಂದ 05.04.2016ರ ವರೆಗೆ ಅಧಿಕೃತ ಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾಸ.2:8(2016)

**ವಿಷಯ:** ಡಿಪ್ಲೊಮಾ ಇನ್ ಫೈರ್ ಆ್ಯಂಡ್ ಇಂಡಸ್ಟ್ರಿಯಲ್ ಸೇಫ್ಟಿ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾಸ.2:9(2016)

**ವಿಷಯ:** ಪದವಿ ಮಟ್ಟದ ಪ್ರಾಣಿಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾಸ.2:10(2016)

**ವಿಷಯ:** ಪದವಿ ಮಟ್ಟದ ಬಿ.ಎಸ್ಸಿ. ಆ್ಯಂಡ್ ಡಿಪ್ಲೊಮಾ ಇನ್ ಆ್ಯನಿಮೇಶನ್ ಆ್ಯಂಡ್ ವಿಜ್ಯುವಲ್ ಇಫೆಕ್ಟ್ಸ್ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಹವಿ ಸಾಸ.2:11(2016)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2016–17ನೇ ಸಾಲಿನ ಆಯವ್ಯಯ ಅಂದಾಜುಗಳು ಮತ್ತು 2015–16ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾಸ.2:12(2016)

**ವಿಷಯ:** Construction of Basement for Compound Wall at the site allotted for Mangalore University P.G. Centre at Belapu Village, Udupi District ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ದಿನಾಂಕ 04.03.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾಸ.2:13(2016)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಎಂಬಲ್ಲಿ ನಿರ್ಮಾಣ ಗೊಂಡಿರುವ ಪುರುಷರ ವಸತಿನಿಲಯದ ಕಾಮಗಾರಿಯಲ್ಲಿನ ಹೆಚ್ಚುವರಿ ಪರಿಮಾಣ ಮತ್ತು ಹೆಚ್ಚುವರಿ ಐಟಂನ ಕಾಮಗಾರಿಗಳ ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ದಿನಾಂಕ 04.03.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾಸ.2:14(2016)

**ವಿಷಯ:** Construction of Girls Hostel (First floor) at P.G. Centre Chikka Aluvara near Kushalnagar Kodagu District ಅಂದಾಜುಪಟ್ಟಿ ಅನುಮೋದನೆ ಬಗ್ಗೆ.

ಅಂದಾಜು ಮೊತ್ತ ರೂ. 1,60,00,000.00

**ಸಭೆಯ ದಿನಾಂಕ: 10.03.2016**

**ನಿರ್ಣಯ:** ದಿನಾಂಕ 04.03.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾಸ.2:15(2016)

**ವಿಷಯ:** Prevention of water leakage in Boys Hostel Dining block at Mangalore University campus, Mangalagangothri ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ದಿನಾಂಕ 04.03.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾಸ.2:16(2016)

**ವಿಷಯ:** Providing Galvalume Sheet roofing to C type Quarters block No-6 at Mangalore University, Mangalagangothri ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ದಿನಾಂಕ 04.03.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾಸ.2:17(2016)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿದೇಶಿ ವಿದ್ಯಾರ್ಥಿಗಳಿಗಾಗಿ ಅಂತರಾಷ್ಟ್ರೀಯ ವಸತಿಗೃಹದ ನಿರ್ಮಾಣ ಕಾಮಗಾರಿ.

ಅಂದಾಜು ಮೊತ್ತ ರೂ. 16.75 ಕೋಟಿ

**ಸಭೆಯ ದಿನಾಂಕ: 10.03.2016**

**ನಿರ್ಣಯ:** ದಿನಾಂಕ 04.03.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾಸ.2:18(2016)

**ವಿಷಯ:** ಪಿಹೆಚ್.ಡಿ. ಪದವಿ ಪ್ರದಾನ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ವಿಶ್ವವಿದ್ಯಾನಿಲಯ ನಿಯಮಾನುಸಾರ ಒಟ್ಟು 18 ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳಲ್ಲಿ ಪಿ.ಹೆಚ್‌ಡಿ ಪದವಿಯನ್ನು ಪ್ರದಾನ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾಸ.2:19(2016)

**ವಿಷಯ:** 2016ನೇ ವರ್ಷದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯ ಪರೀಕ್ಷೆಗಳನ್ನು ನಡೆಸಲು ರಚನೆಯಾದ ಪರೀಕ್ಷಕರ ಮಂಡಳಿಯ ಅನುಮೋದನೆ ಕುರಿತು.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಪರೀಕ್ಷಕರ ನೇಮಕಾತಿ ಮಂಡಳಿ ಶಿಫಾರಸ್ಸು ಮಾಡಿರುವ ವಿವಿಧ ಪರೀಕ್ಷಾ ಮಂಡಳಿಯ ಪರೀಕ್ಷಕರ ಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ.2:20(2016)

**ವಿಷಯ:** ಶೋಧಗಂಗಾ ಪ್ರಾಜೆಕ್ಟ್, ಮಂಗಳೂರು ವಿಶ್ವವಿದ್ಯಾನಿಲಯ – ಸರ್ವರ್, ಕಂಪ್ಯೂಟರ್ ಮತ್ತು ಪ್ರಿಂಟರ್ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾಸ.2:21(2016)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಘಟಕ ಕಾಲೇಜುಗಳಲ್ಲಿರುವ ಸಭಾಂಗಣಗಳಿಗೆ, ಆಟದ ಮೈದಾನಗಳಿಗೆ ಹಾಗೂ ತರಗತಿ ಕೊಠಡಿಗಳಿಗೆ ಶುಲ್ಕ ನಿಗದಿಪಡಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಸದರಿ ವಿಷಯದ ಬಗ್ಗೆ ದಿನಾಂಕ 10.02.2016ರಂದು ನಡೆದ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾಸ.2:22(2016)

**ವಿಷಯ:** ಯುಜಿಸಿ ಪರಿಷ್ಕೃತ ವೇತನ ಶ್ರೇಣಿಗೆ ಸಂಬಂಧಿಸಿದ ಸರಕಾರಿ ಆದೇಶದನ್ವಯ ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಅರ್ಹ ಬೋಧಕರನ್ನು ಸಹ ಪ್ರಾಧ್ಯಾಪಕರಾಗಿ ಮರುಪದನಾಮೀಕರಿಸಿ ವೇತನ ಶ್ರೇಣಿ ನಿಗದಿಪಡಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾಸ.2:23(2016)

**ವಿಷಯ:** ಶಿಕ್ಷಕರ ಪರೀವೀಕ್ಷಣಾವಧಿಯನ್ನು ಘೋಷಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾಸ.2:24(2016)

**ವಿಷಯ:** ಶಿಕ್ಷಕರ ಪರೀವೀಕ್ಷಣಾವಧಿಯನ್ನು ಘೋಷಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾಸ.2:25(2016)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರು ಇಲ್ಲಿಗೆ ಹೊಸ ವಾಹನವನ್ನು ಖರೀದಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾಸ.2:26(2016)

**ವಿಷಯ:** ಆಗಸ್ಟ್/ಸಪ್ಟೆಂಬರ್ 2015ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ಪೂರಕ ಪದವಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಪರೀಕ್ಷಾ ಅವ್ಯವಹಾರಗಳು – ದಂಡನೆಯನ್ನು ದೃಢಪಡಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ವಿದ್ಯಾರ್ಥಿಗಳಿಂದ ಬಂದ ಉತ್ತರಗಳನ್ನು ಪರಿಶೀಲಿಸಿ, ಪ್ರಸ್ತಾವಿಸಲಾದ ದಂಡನೆಯನ್ನು ದೃಢೀಕರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾಸ.2:27(2016)

**ವಿಷಯ:** ಅಕ್ಟೋಬರ್/ನವೆಂಬರ್ 2015ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು – ದಂಡನೆಯನ್ನು ದೃಢಪಡಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ವಿದ್ಯಾರ್ಥಿಗಳಿಂದ ಬಂದ ಉತ್ತರಗಳನ್ನು ಪರಿಶೀಲಿಸಿ, ಪ್ರಸ್ತಾವಿಸಲಾದ ದಂಡನೆಯನ್ನು ದೃಢೀಕರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ.2:28(2016)

**ವಿಷಯ:** ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರುಗಳಿಗೆ ಕಿರು ಸಂಶೋಧನಾ ಪ್ರಸ್ತಾವನೆ ಮಂಜೂರು ಮಾಡುವ ಬಗ್ಗೆ.

**ಸಭೆಯ ದಿನಾಂಕ: 10.03.2016**

ನಿರ್ಣಯ: ಸದರಿ ವಿಷಯದ ಬಗ್ಗೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ.2:29(2016)

ವಿಷಯ: ವಿಶ್ವವಿದ್ಯಾನಿಲಯ ಆರೋಗ್ಯ ಕೇಂದ್ರ, ಮಂಗಳಗಂಗೋತ್ರಿ – ಉಪಕರಣ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 10.03.2016**

ನಿರ್ಣಯ: ದಿನಾಂಕ 09.03.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ.2:30(2016)

**ವಿಷಯ:** ವಿಶ್ವವಿದ್ಯಾನಿಲಯದ ಶಿಕ್ಷಕರುಗಳು ನೀಡುವ ಸಮಾಲೋಚನಾ ಸೇವೆಯನ್ನು (CONSULTANCY SERVICES) ನಿರ್ಬಂಧಿಸುವ ಅನುಶಾಸನಕ್ಕೆ ತಿದ್ದುಪಡಿ ಮಾಡುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಪ್ರಸ್ತಾವನೆಯನ್ನು ಮತ್ತೊಮ್ಮೆ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ.2:31(2016)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿಜ್ಞಾನ ಉಪಕರಣ ಕೇಂದ್ರದಲ್ಲಿರುವ AAS ಉಪಕರಣಕ್ಕೆ software ನ್ನು ಅಳವಡಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ದಿನಾಂಕ 09.03.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ.2:32(2016)

ವಿಷಯ: Web portal project – ಹೆಚ್ಚುವರಿ ಖರ್ಚಾದ ಮೊತ್ತಕ್ಕೆ ಮಂಜೂರಾತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 10.03.2016**

ನಿರ್ಣಯ: ಹೆಚ್ಚುವರಿ ಮೊತ್ತ ರೂ.11,41,972ಕ್ಕೆ ಮಂಜೂರಾತಿ ನೀಡುವುದರೊಂದಿಗೆ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾಸ.2:33(2016)

**ವಿಷಯ:** ಶಿಕ್ಷಕರ ಪರೀವೀಕ್ಷಣಾವಧಿಯನ್ನು ಘೋಷಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾಸ.2:34(2016)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕ ಹುದ್ದೆಯ ಪ್ರಭಾರವನ್ನು ನೀಡಿರುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾಸ.2:35(2016)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಸ್ಥಾಪನೆ ಮತ್ತು ಹುದ್ದೆಗಳ ಸೃಜನೆಗೆ ಸಂಬಂಧಿಸಿದ ಪರಿನಿಯಮದ ಅನುಮೋದನೆ ಪಡೆಯುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾಸ.2:36(2016)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ / ಕಛೇರಿಗಳಿಗೆ ಅಗತ್ಯವಿರುವ ಕಂಪ್ಯೂಟರ್, UPS ಇತ್ಯಾದಿ ಖರೀದಿಸುವ ಬಗ್ಗೆ.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಸದರಿ ಖರೀದಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾಸ.2:37(2016)

**ವಿಷಯ:** ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯಕ್ಕೆ 5 KVA UPS with Battery ಖರೀದಿ ಕುರಿತು.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾಸ.2:38(2016)

**ವಿಷಯ:** ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿಗೆ 5 KVA UPS ಖರೀದಿ ಕುರಿತು.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಸದರಿ ಖರೀದಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾಸ.2:39(2016)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಆಗಮಿಸುವ ಗಣ್ಯ ಅತಿಥಿಗಳ ವಾಸ್ತವ್ಯಕ್ಕೆ ಮಂಗಳೂರಿನಲ್ಲಿ ಹೋಟೇಲ್ ಕೊಠಡಿ ಬಾಡಿಗೆ ಪಡೆಯುವ ಬಗ್ಗೆ.

**ಸಭೆಯ ದಿನಾಂಕ: 10.03.2016**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಹೋಟೇಲುಗಳಾದ Gold Finch Hotel, Mangalore ಮತ್ತು The Ocean Pearl, Mangalore ಇವರು ಸಲ್ಲಿಸಿದ ಪ್ರಸ್ತಾವನೆಯ ಬಗ್ಗೆ ಚರ್ಚಿಸಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾಸ.2:40(2016)

**ವಿಷಯ:** ಡಾ. ಟಿ. ಜಯಪ್ರಕಾಶ್ ರಾವ್, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು.

ಪ್ರಸ್ತಾವನೆ 1. Open choice to be given to the students, while selecting the Choice Based Subject in III semester of PG Programme.

ಪ್ರಸ್ತಾವನೆ 2. Mandating the Accreditation of Higher Education Institutions through NAAC / NBA.

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಪ್ರಸ್ತಾವನೆ ಕ್ರ.ಸಂ.1ಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದಲ್ಲಿ CBCS ಅಳವಡಿಕೆ ಬಗ್ಗೆ ಈಗಾಗಲೇ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಹಲವಾರು ರಚನಾತ್ಮಕ ಬದಲಾವಣೆಗಳೊಂದಿಗೆ ವರದಿ ನೀಡಲಿರುವ ಹಿನ್ನೆಲೆಯಲ್ಲಿ ನಂತರ ಈ ವಿಷಯವನ್ನು ಪ್ರಸ್ತಾಪಿಸಲು ಸಭೆ ನಿರ್ಣಯಿಸಿತು.

ಪ್ರಸ್ತಾವನೆ ಕ್ರ.ಸಂ.2ಕ್ಕೆ ಸಂಬಂಧಿಸಿದಂತೆ, MBA courseಗಳನ್ನು ನಡೆಸುತ್ತಿರುವ ಕಾಲೇಜುಗಳ ಮಾನ್ಯತೆ ಪಡೆದುಕೊಳ್ಳುವ ಬಗ್ಗೆ UGC/AICTE ನಿಯಮಗಳ ರೀತಿ ಪರಿಗಣಿಸುವ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲು ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.2:41 (2016)

**ವಿಷಯ:** ಶ್ರೀ ಪ್ರಸನ್ನ ಕುಮಾರ್ ರೈ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು.

1. ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಜಮೀನಿನ ವಿಲೇವಾರಿಗೆ ಅಧಿಕಾರಿಯನ್ನು ಅಧಿನಿಯಮಿಸಿದ ಕುಲಪತಿಗಳನ್ನು ಅಭಿನಂದಿಸುತ್ತಾ – ಆದಷ್ಟು ಬೇಗನೆ ಆವರಣಗೋಡೆ ಅಥವಾ ಆವರಣಾಬೇಲಿ (ಕೊಣಾಜೆ, ಬೆಳಪು, ಮಂಗಳೂರು) ಹಾಕಿಸಲು ತಗಲುವ ಅಂದಾಜು ವೆಚ್ಚವನ್ನು ಭರಿಸುವ ಬಗ್ಗೆ ಚರ್ಚಿಸುವುದು.
2. 2017–18ರಲ್ಲಿ ವಿಶ್ವವಿದ್ಯಾನಿಲಯದಲ್ಲಿ ಬಹಳಷ್ಟು ಉದ್ಯೋಗಿಗಳು ವಯೋನಿವೃತ್ತಿ ಹೊಂದುವುದರಿಂದ ಆ ಹುದ್ದೆಯಗಳನ್ನು ತುಂಬಲು ಸರ್ಕಾರದ ಅನುಮತಿ ಹಾಗೂ ಇನ್ನಿತರ ಸಂಬಂಧಪಟ್ಟ ಕಾರ್ಯಗಳನ್ನೂ ಈಗಿಂದಲೇ ಪ್ರಾರಂಭಿಸುವುದು.

3. ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಿರುವ ಕಾರ್ಪೋರೇಶನ್ ಬ್ಯಾಂಕ್ ಪೀಠದ ಮುಖಾಂತರ ಬ್ಯಾಂಕಿನ ಸಹಯೋಗದೊಂದಿಗೆ ವಿಶ್ವವಿದ್ಯಾನಿಲಯದಲ್ಲಿ 'ಕೌಶಲ್ಯ ಅಭಿವೃದ್ಧಿ ಕೇಂದ್ರ'(Skill development centre) ವನ್ನು ಸ್ಥಾಪಿಸುವುದು. (ಪ್ರಾರಂಭಿಕವಾಗಿ ಆಸುಪಾಸಿನ ಯುವತಿಯರಿಗೆ ಟೈಲರಿಂಗ್ ತರಬೇತಿ).

**ಸಭೆಯ ದಿನಾಂಕ: 10.03.2016**

**ನಿರ್ಣಯ:** ಪ್ರಸ್ತಾವನೆ ಕ್ರ.ಸಂ.1ಕ್ಕೆ ಸಂಬಂಧಿಸಿದಂತೆ, ಆವರಣಗೋಡೆ ಹಾಕಿಸಲು ಸದರಿ ಅಂದಾಜು ವೆಚ್ಚವನ್ನು ಭರಿಸಲು ಪರಿಗಣಿಸುವಂತೆ ಸಭೆಯು ಸೂಚಿಸಿತು.

ಪ್ರಸ್ತಾವನೆ ಕ್ರ.ಸಂ.2ಕ್ಕೆ ಸಂಬಂಧಿಸಿದಂತೆ, ಸದರಿ ವಿಷಯದ ಬಗ್ಗೆ ಈಗಾಗಲೇ ಸರ್ಕಾರಕ್ಕೆ ಕೋರಿಕೆ ಸಲ್ಲಿಸಿದ್ದು, ಮತ್ತೊಮ್ಮೆ ಹುದ್ದೆಗಳನ್ನು ತುಂಬಲು ಸರ್ಕಾರದ ಅನುಮತಿಗಾಗಿ ಕೋರಿಕೆ ಸಲ್ಲಿಸುವುದಾಗಿ ತಿಳಿಸಲಾಯಿತು.

ಪ್ರಸ್ತಾವನೆ ಕ್ರ.ಸಂ.3ಕ್ಕೆ ಸಂಬಂಧಿಸಿದಂತೆ, Skill development centreನ್ನು ಆದ್ಯತೆಯ ಮೇಲೆ ಸೂಕ್ತ ಸೌಲಭ್ಯಗಳೊಂದಿಗೆ ಸ್ಥಾಪಿಸುವ ವಿಚಾರವನ್ನು ಪರಿಗಣಿಸುವಂತೆ ತೀರ್ಮಾನಿಸಲಾಯಿತು.